# ಮಾತು

'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ಶರಣ ವಚನದಂತೆ ಮಾತಿನ ಪ್ರಾಮುಖ್ಯತೆಯನ್ನು ಕುರಿತು ಲೇಖಕರು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

ಡಾ. ಗುಂಡಣ್ಣ ಕಲಬುರ್ಗಿ

ಮಾತು ಒಂದು ಕಲೆ. ಮಾತಿನಿಂದಲೆ ಮನುಷ್ಯನ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. 'ಮಾತು' ಮತ್ತು 'ಭಾಷಣ' ಈಗ ಬೇರೆ ಬೇರೆ ಅರ್ಥ ಪಡೆದಿವೆ. ಮಾತಿಗಿರುವ ಗೌರವ, ಘನತೆ ಭಾಷಣಕ್ಕೆ ಸದಾ ಉಳಿದಿರುವುದಿಲ್ಲ ಭಾಷಣ ವಾಚ್ಯವಾಗುತ್ತಾ ಹೋದರೆ ಮಾತು ಧ್ವನಿಪೂರ್ಣಗೊಳ್ಳುತ್ತ, ಮಾರ್ಮಿಕ ವಾಗುತ್ತ ಹೃದಯಕ್ಕೆ ಹತ್ತಿರಗೊಂಡು ನಮ್ಮದೆನಿಸುತ್ತದೆ. ಆದರೆ ಇವೆರಡರ ಅಂತರವನ್ನು ಅರಿಯದೆ ಪ್ರಯೋಗಿಸಿದ ಮಾತು ಅನರ್ಥವಾಗುವುದು. ಇಂದಿನ ರಾಜಕೀಯ ಭಾಷಣಗಳನ್ನು ನೆನಪಿಸಿಕೊಂಡರೆ ಮೇಲಿನ ವಾಕ್ಯದ ಸತ್ಯತೆ ಸ್ಪಷ್ಟವಾಗುತ್ತದೆ. ಕವಿ ಕಣವಿಯವರು ಒಂದು ಕಡೆ ಇದನ್ನೇ ಹೇಳಿದ್ದಾರೆ: "ವಿಶ್ರಾಂತ ಜೀವನದಲ್ಲೂ ಬಿಡುವಿಲ್ಲವೆಂದರೆ ಹೇಗೆ? ಮಾತಾಡು, ಭಾಷಣ ಬಿಟ್ಟು ಬೇರೆ ವಿಷಯ." ಸರಿ. ಸ್ಪಷ್ಟ ಗೊಳಿಸಲು ಎತ್ತಿಕೊಂಡ ಎರಡು ಪದಗಳ ನಡುವಿನ ವ್ಯತ್ಯಾಸ ವನ್ನು ಈ ಕವಿತೆಯ ಸಾಲು ತೆರೆದಿಟ್ಟಿದೆ.

ಕೆಲವರು ಚೆನ್ನಾಗಿ ಮಾತಾಡುತ್ತಾರೆ, ಪ್ರೀತಿಯನ್ನು ಗಳಿಸು ತ್ತಾರೆ, ಆದರೆ ತಮ್ಮ ಜೀವನದಲ್ಲಿ ತಾವು ಮಾತನಾಡಿದ ವಿಚಾರಗಳನ್ನು ಅನುಷ್ಠಾನಗೊಳಿಸಿರುವುದಿಲ್ಲ. ಜೀವನದಲ್ಲಿ ಅನುಷ್ಠಾನಗೊಂಡಾಗ ಮಾತ್ರ ಮಾತಿಗೆ ಒಂದು ಮೌಲ್ಯ ಪ್ರಾಪ್ತ ವಾಗುತ್ತದೆ. ಸಿದ್ಧಗೊಳಿಸಿದ ಭಾಷಣ ಏಕೆ ಮಾತಾಗುವುದಿಲ್ಲ ಎಂದರೆ, ಅದು ಕೇವಲ ಹೇಳಿಕೆಗಳ ಮಟ್ಟಕ್ಕೆ, ಮಾತಿನ ಚಪಲ ವನ್ನು ತೀರಿಸಿಕೊಳ್ಳುವ ಉದ್ದೇಶಕ್ಕೆ ವಿರಮಿಸುವುದರಿಂದ ತನ್ನ ಗುಣಮೌಲ್ಯವನ್ನು ಗೌಣಗೊಳಿಸಿಕೊಳ್ಳುತ್ತದೆ. ಮಾತು ಅಂತ ರಂಗದ 'ವಾಣಿ'ಯಾಗಬೇಕು. ಬಹಿರಂಗದ ಸತ್ಯವನ್ನು ಕಂಡು ವ್ಯಕ್ತಪಡಿಸಬೇಕು. ಮೂಲತಃ ಸತ್ಯವೊಂದೇ ಆಗಿರುವುದರಿಂದ ಅಂತರಂಗ, ಬಹಿರಂಗವೆಂಬ ಭೇದವಿಲ್ಲ. ವ್ಯಕ್ತಿಯು ತನ್ನ ವೈಯಕ್ತಿಕ ಅನುಭವಗಳನ್ನೂ ಕೂಡ ಸರಿಯಾಗಿ ಪರಿಶೀಲಿಸುವ ಅಭ್ಯಾಸವನ್ನು ರೂಢಿಸಿಕೊಂಡರೆ ಅದರ ಸಾಮಾಜಿಕ ಆಯಾಮ ಗಳನ್ನು ಅರಿಯಬಲ್ಲ.

ಶರಣರು ಮಾಡಿದ್ದು, ಅನುಭವಿಸಿದ್ದು, ಬೋಧಿಸಿದ್ದು ಇದನ್ನೇ. ಬಸವಾದಿಗಳು ಮಾತಾಡಿದಂತೆ ನಡೆದರು, ನಡೆ ದಂತೆ ಮಾತಾಡಿದರು. ಮಾತು-ಬದುಕುಗಳ ನಿಲುವು ಒಂದೇ ಆಗಿರುವುದರಿಂದ ಇವರಿಂದ ಲೋಕವನ್ನು ಗೆಲ್ಲಲು, ಕಟ್ಟಲು ಸಾಧ್ಯವಾಯಿತು. ಮಾತಿನಿಂದಲೇ ಮನಸ್ಸು, ಮನೆ, ನಾಡು, ದೇಶ ಎಲ್ಲವನ್ನೂ ಕಟ್ಟಬಹುದು. ಅದೇ ಮಾತಿನಿಂದಲೇ ಇವೆಲ್ಲವನ್ನೂ ಒಡೆಯಲೂಬಹುದು. ಆದರೆ ಕವಿವಾಣಿ ಹೀಗೆ ಹೇಳುತ್ತದೆ: "ಕಟ್ಟಬಲ್ಲೆವು ನಾವು, ಕೆಡಹಲೊಲ್ಲೆವು". ಮನುಷ್ಯ ನಾಗಿ ಹುಟ್ಟಿ ಮಾತು, ನೀತಿ, ಸಹನೆ, ಸಾಮರ್ಥ್ಯಗಳಿಂದ ಕಟ್ಟುವ ಕಾರ್ಯವನ್ನು ಮಾಡಬೇಕೆ ವಿನಾ, ಒಡೆಯುವ ಕಿಲುಬು ಹೃದಯ ಸಲ್ಲ. ಇಂಗ್ಲಿಷ್ ಗಾದೆ ಹೇಳುತ್ತದೆ: **Great deeds and small minds ill go together** ದೊಡ್ಡ ಕಾರ್ಯಗಳು ಮತ್ತು ಸಣ್ಣ ಮನಸ್ಸುಗಳು ಎಂದೂ ಒಂದುಗೂಡವು. ಹೀಗಾಗಿ ಮಾತು, ಕಾರ್ಯಗಳು ಚೆನ್ನಾಗಿರಬೇಕಾದರೆ ದೊಡ್ಡ ಮನಸ್ಸಿನಿಂದಲೇ ತೊಡಗಬೇಕು, ಕಾರ್ಯಶೀಲವಾಗಬೇಕು.

ಅನೇಕರು ತಮ್ಮ ಜೀವನದಲ್ಲಿ ಮುಂದೆ ಸಾಗದೆ ಇರು ವುದಕ್ಕೆ ಕಾರಣ, ಅವರು ಸುಮ್ಮನೆ ಮಾತಾಡುತ್ತಲೇ ಕಾಲ ವನ್ನು ವ್ಯಯಿಸುವುದು. ಈ 'ಮಾತು' ತನ್ನ ಅರ್ಥಶಕ್ತಿಯನ್ನು ಕಳೆದುಕೊಂಡು, ವ್ಯಕ್ತಿಯ ಸಾಮಾಜಿಕ ಮೌಲ್ಯವನ್ನು ಹಗುರ ಗೊಳಿಸುವುದು. ಕವಿವಾಣಿ ಹೀಗಿದೆ:

**ಆ ಮಾತು ಈ ಮಾತು ಹಾಗಾಯ್ತು ಹೀಗಾಯ್ತು**
**ಏನಾಯ್ತು?—ಮನ ಬೀತು ಬಂಜರಾಯ್ತು;**
**ಹಗಲೆಲ್ಲ ಹೈರಾಣ, ಮಾತೆಂಬುದೇ ಮರಣ**
**ಅಂದಂದಿಗೇ ಮೌನ ಬೇಕಾಯಿತು.**

ಮಾತು ಭಾಷಣಕ್ಕಿಂತಲೂ ಭಿನ್ನವಾದ ಅರ್ಥವ್ಯಾಪ್ತಿ ಯನ್ನು ಪಡೆದಿದೆ. ವ್ಯರ್ಥವಾದ ಮಾತು ಮನುಷ್ಯನನ್ನು, ವ್ಯಕ್ತಿಯನ್ನು ದೊಡ್ಡವನನ್ನಾಗಿ ಮಾಡಲಾರವು; ಸುಂದರವಾದ ಬಾಳಿಗೆ ಬೆಳಕನ್ನು ನೀಡಲಾರವು. ನುಡಿದರೆ ಮುತ್ತಿನ ಹಾರ ದಂತಿರಬೇಕೆಂದು ಶರಣರು ಹೇಳಿಲ್ಲವೇ? ಬಸವಣ್ಣನವರ ಪ್ರಸಿದ್ಧ ವಾದ ವಚನವಿದೆ: ವಚನದಲ್ಲಿ ನಾಮಾಮೃತ ತುಂಬಿ... ಆಧ್ಯಾತ್ಮಿಕ ಚಿಂತನೆಯಿಂದ ವಾಕ್, ಶ್ರವಣಗಳು ಶುದ್ಧ ಗೊಂಡಾಗ ಮಾತಿಗೆ ಘನತೆ ಬರುತ್ತದೆ, ಹೃದಯದಿಂದ ಅದು ಹೊರಹೊಮ್ಮುತ್ತದೆ. ಇಲ್ಲದಿದ್ದರೆ ಅದು ಅಹಂಕಾರವನ್ನು ಪೋಷಿಸುವ ಬರಿಯ ಪದಗಳ ಜೋಡಣೆಯಾಗಿಯೇ ಉಳಿಯುತ್ತದೆ. ಮತ್ತೆ ಮಾತಿಗೆ ಅರ್ಥ, ಘನತೆ, ಗೌರವ ಸೇರ್ಪಡೆಯಾಗಬೇಕಾದರೆ ಅದರೊಂದಿಗೆ ಹದವಾದ ಮೌನ ಬೇಕಾಯಿತು ಎಂತಲೇ ಕವಿವಾಣಿ ತನ್ನ ಆತಂಕವನ್ನು ವ್ಯಕ್ತ ಪಡಿಸಿದ್ದು. ಮಾತಿನ ಧ್ವನಿಶಕ್ತಿ, ಪರಿಣಾಮ, ಅರ್ಥವಿಸ್ತಾರ ಗಳನ್ನು ಕೆಳಗಿನ ಸಾಲುಗಳು ಇನ್ನಷ್ಟು ಸಾರಿ ಹೇಳುತ್ತವೆ: **ಮಾತು ಬರುವುದು ಎಂದು ಮಾತಾಡುವುದು ಬೇಡ: ಒಂದು ಮಾತಿಗೆ ಎರಡು ಅರ್ಥಗಳುಂಟು; ಎದುರಿಗಿರುವವ ಕೂಡ ಮಾತ ಬಲ್ಲವ, ಗೆಳೆಯ; ಬರಿದೆ ಆಡುವ ಮಾತಿಗರ್ಥವಿಲ್ಲ.**